# ಬಚ್ಚನ್ 70



‘ಎಲ್ಲರ ಜೀವನದಲ್ಲೂ ಏರಿಳಿತಗಳು ಇದ್ದೇ ಇರುತ್ತವೆ. ಮೇಲೆ ಏರಿದವರು ಕೆಳಗೆ ಇಳಿಯಲೇಬೇಕು. ನಾನು ಯಾವತ್ತೂ ಜನಪ್ರಿಯತೆಯ ಬಗ್ಗೆ ತಲೆ ಕೆಡಿಸಿಕೊಂಡವನಲ್ಲ. ನಾನು ಬೇರೆಯವರಿಗಿಂತ ಭಿನ್ನನೂ ಅಲ್ಲ’

–ನಾಲ್ಕು ದಶಕಗಳ ನಟನಾ ವೃತ್ತಿ ಜೀವನದಲ್ಲಿ 180 ಸಿನಿಮಾಗಳಲ್ಲಿ ನಟಿಸಿ, ಬಾಲಿವುಡ್‌ನ ಮೇರು ನಟ ಎನ್ನಿಸಿಕೊಂಡ ಅಮಿತಾಭ್ ಬಚ್ಚನ್, 70ನೇ ಹುಟ್ಟುಹಬ್ಬದ ಮುನ್ನಾದಿನ ಮಾಧ್ಯಮಗಳಿಗೆ ಹೇಳಿದ ಮಾತುಗಳಿವು.

ಬಾಲಿವುಡ್ ಬಹಳ ಸಂಭ್ರಮದಿಂದ ಕಳೆದ ವಾರ (ಅಕ್ಟೋಬರ್11) ಅಮಿತಾಭ್ ಬಚ್ಚನ್‌ರ ಹುಟ್ಟುಹಬ್ಬವನ್ನು ಆಚರಿಸಿತು. ಸಮಕಾಲೀನ ತಾರೆಯರ, ಸ್ನೇಹಿತರ, ಕುಟುಂಬದ ಸದಸ್ಯರ ಸಣ್ಣದೊಂದು ಗುಂಪು ಒಟ್ಟು ಸೇರಿ ಮುನ್ನಾದಿನದ ರಾತ್ರಿ ಪಾರ್ಟಿಯನ್ನು ಸಂಭ್ರಮಿಸಿದರೆ, ಹುಟ್ಟುಹಬ್ಬದಂದು 70 ಖ್ಯಾತನಾಮ ಕಲಾವಿದರ ಚಿತ್ರಗಳ ಪ್ರದರ್ಶನವನ್ನು ಅಮಿತಾಭ್ ಉದ್ಘಾಟಿಸಿದರು. ಅಮಿತಾಭ್ ಮನೆಯ ಮುಂದೆ ಅಭಿಮಾನಿಗಳೂ ಸೇರಿದ್ದರು.

ಹುಟ್ಟುಹಬ್ಬದ ನೆಪದಲ್ಲೇ ಅಮಿತಾಭ್ ನಡೆದುಬಂದ ಹಾದಿಯ ಹೆಜ್ಜೆ ಗುರುತುಗಳಿಗೂ ವಂದನೆ ಸಲ್ಲಿಸಿದ್ದಾರೆ. “ನಟನೆಯ ಮಟ್ಟಿಗೆ ನನಗೆ ಆದರ್ಶವಾಗಿದ್ದವರು ದಿಲೀಪ್ ಸಾಬ್ ಮತ್ತು ವಹೀದಾ ರೆಹಮಾನ್. 82ರಲ್ಲಿ ದಿಲೀಪ್ ಸಾಬ್ ಜತೆಗೆ ಶಕ್ತಿ ಎಂಬ ಸಿನಿಮಾದಲ್ಲಿ ನಟಿಸಿದ್ದು ನನಗೆ ನಂಬಲಾಗದ ಅನುಭವ. ನಿರ್ದೇಶಕ ಹೃಷಿಕೇಶ್ ಮುಖರ್ಜಿಯವರು ನನ್ನ ಗಾಡ್‌ಫಾದರ್. ‘ಸಾಥ್ ಹಿಂದೂಸ್ತಾನಿ’ಯಲ್ಲಿ ನನಗೆ ಅವಕಾಶ ಕೊಟ್ಟ ಕೆ.ಎ.ಅಬ್ಬಾಸ್ ಅವರನ್ನು ಮರೆಯಲಾರೆ” ಎನ್ನುವುದು ಅಮಿತಾಭ್ ವಿನಮ್ರ ನುಡಿ.

ಬಾಲಿವುಡ್‌ನ ಹೊಸ ತಲೆಮಾರಿನ ನಿರ್ದೇಶಕರ ಬಗ್ಗೆಯೂ ಅಮಿತಾಭ್‌ಗೆ ಮೆಚ್ಚುಗೆಯಿದೆ. ‘ಆದಿತ್ಯ ಚೋಪ್ರಾ, ಕರಣ್ ಜೋಹರ್, ಆರ್. ಬಾಲ್ಕಿ, ಶುಜಿತ್ ಸರ್ಕಾರ್, ಪ್ರಕಾಶ್ ಝಾ ಮುಂತಾದ ನಿರ್ದೇಶಕರು ಬಾಲಿವುಡ್‌ನ ಭವಿಷ್ಯವನ್ನು ಉಜ್ವಲಗೊಳಿಸಿದ್ದಾರೆ’ ಎನ್ನುವುದು ಬಚ್ಚನ್ ಶಹಬ್ಬಾಸ್‌ಗಿರಿ! ●




Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65